ಅಡ್ಡಾಡಿಸುತ್ತಾ, ಶಾಂತಾವಸ್ಥೆಯಲ್ಲಿ ಚಿತ್ರಕಾರನ ಕೈಯ ಕುಂಚದಂತೆ ನಾಜೂಕಾಗಿ ಓಡಾಡಿಸುತ್ತಾ, ಬಚ್ಚಲಿನ ಮೋಟು ಹಿಡಿಯನು ಕರಕರಯೆಂದು ದೇಹದ ಬಲವೆಲ್ಲ ಹಾಕಿ ಉಜ್ಜಿ ಉಡುಗುತ್ತಾ, ಹಿತ್ತಲಿನ ಉದ್ದ ಹಿಡಿಯಲಿ ಪರಪರಯೆಂದು ತರಗೆಲೆಗಳನ್ನು ಹಾರಿಸುತ್ತಾ, ಹಟ್ಟಿಯ ಗಟ್ಟಿ ಹಿಡಿಯಲಿ ಒಣಹುಲ್ಲಿನ ಜೊತೆ ಸಗಣಿ ಗಂಜಳಗಳನು ನೂಕುತ್ತಾ... ಹೀಗೆ ಎಷ್ಟೋ ವರ್ಷಗಳನ್ನು ಇದರೊಂದಿಗೆ ಕಳೆದಿದ್ದೇನೆ. ಈಗ...

ಮನೆಯೊಳಗಿನ ಕೋಮಲೆ ಕಸಬರಿಗೆಯನು ಪಿಡಿಪಿಡಿದು
ಅನುದಿವೂ ಗುಡಿಸುತಲಿರ್ಪ ದೇವಾ,
ಎಂದಿಗೆ ನನ್ನ ಅಂಗೈಯಿಂದ ಈ ಮಂಕಿಯನು ಕಳೆದು ಇಷ್ಟದಂಕವನಿಕ್ಕುವೆಯೋ,
ಈ ಗುಡಿಸುವ ಭವದಿಂದ ಗುಡಿಸದ ಅಭವನೆಡೆಗೆ
ಒಯ್ಯುವೆಯೋ ತಿಳಿಯೆನಯ್ಯಾ,
ಮಹಾ ಕಸದಯ್ಯ ಪ್ರಭುವೇ ಕೊನೆಗಾಣಿಸೀ
ಕಸದಿಂದ ಕಸವ ಬಾಚುವ ಕಸುಬನು...

ಎನ್ನುತ್ತಾ, ಈ ಗುಡಿಸುವ ಕಾಯಕದಿಂದ ಬಿಡುಗಡೆ ಹೊಂದಿ ಮುಕ್ತಿಗಾಗಿ ಹಂಬಲಿಸುತ್ತಿದ್ದೇನೆ. ಮೊಬೈಲ್ ಬಿದ್ದರೆ ಹೆಕ್ಕಿಕೊಂಡಷ್ಟೇ ಸೊಂಟ ಬಗ್ಗಿಸಿ ಗೊತ್ತಿರುವ ಇಂದಿನ ಅಪ್‌ಡೇಟೆಡ್‌ಗಳಿಗೆ ನನ್ನಂಥ ಅವುಟ್‌ಡೇಟೆಡ್‌ಗಳು ಹೇಳುವ ಈ ಮಾತುಗಳೆಲ್ಲ ಹೇಗೂ ಕಮ್ಯೂನಿಕೇಟ್ ಆಗುವುದಿಲ್ಲ ಎಂದೇ ಎಲ್ಲೆಂದರಲ್ಲಿ ಈ ವಿಷಯ ಮಾತಾಡುವುದನ್ನು ಬಿಟ್ಟಿದ್ದೇನೆ.

ಸ್ವಚ್ಛ ಭಾರತದಲ್ಲಿ ಪ್ರಧಾನ ಮಂತ್ರಿಯಾದಿಯಾಗಿ ಎಲ್ಲರೂ ಬಿಳಿ ಬಿಳಿ ಬಣ್ಣದ ಬಟ್ಟೆಗಳನ್ನು ತೊಟ್ಟು ಒಂದಿಂಚೂ ಬಗ್ಗದೆ ಗುಡಿಸುತ್ತಿದ್ದ ಕಸಬರಿಗೆಯ ಮೇಲೊಂದು ವಿಪರೀತ ಮಮತೆ ನನಗೆ. ಗುಡಿಸಿ ಗುಡಿಸೀ ಕೆಲವೊಮ್ಮೆ ಸೊಂಟ ಸೋಬಾನೆಯಾಗುವಾಗ ಈ ಆಸೆ ಉಲ್ಬಣಿಸಿ ನನಗೊಂದು ಅಂಥ ಕಸಬರಿಗೆ ಸಿಕ್ಕಿದ್ದರೆ ಅಂದುಕೊಳ್ಳುವಾಗ, ನಿನ್ನ ಪೊರಕೆಗೊಂದು ಬಿದಿರಿನ ಗಳ ಕಟ್ಟಿ ಕೊಡುತ್ತೇನೆ ಆಗ ನೀನೂ ಬೃಹತ್ ಬೆಂಗಳೂರನ್ನು ಗುಡಿಸಿದಂತೆ ನಿಂತುಕೊಂಡೇ ನಮ್ಮಂಗಳವನ್ನೂ ಗುಡಿಸಬಹುದು ಎಂಬ ಯಜಮಾನರ ಆಶ್ವಾಸನೆ ಈಡೇರುವ ಕಾಲಕ್ಕಾಗಿ, ಕಸಬರಿಗೆಯಂತೆ ಮೂಲೆಯಲ್ಲಿ ಕುಳಿತು ಕಾಯುತ್ತಿದ್ದೇನೆ. ಎಂಥಾ ಯುರೇಕಾಗಳು ಬಂದರೂ ಪೊರಕೆಗಳು ಮನೆಗೆ ಬಂದ ಸೊಸೆಯರಂತೆ ಮನೆಯ ಕಾಯಂ ಸದಸ್ಯರಾಗಿ ಈ ವ್ಯಾಕ್ಯೂಂ ಕ್ಲೀನರ್‌ಗಳನ್ನೆಲ್ಲ ಕ್ಲೀನಾಗಿ ಮಂಚದ ಕೆಳಗಿನ ವ್ಯಾಕ್ಯೂಂಗೆ ತಳ್ಳಿಬಿಡುತ್ತವೆ. ಮತ್ತೆ ಮಂಚದ ಕೆಳಗೆ ಪೊರಕೆ ಆಡಿಸುವಾಗ ತಡವುತ್ತಾ (ದೊಡ್ಡ ಕಸದಂತೆ) ನಾನಿಲ್ಲಿದ್ದೇನೆ ಎಂದು ಜ್ಞಾಪಿಸುವುದು ಮನೆ ಗುಡಿಸುವವರೆಲ್ಲರ ನಿತ್ಯದ ಅನುಭವ. ಕೆಲಸದವಳು ಬಂದು ಗುಡಿಸಿ ಹೋದರೂ ಸಫಾಯಿಯಾಗದ ಸೋಫದ ಕೆಳಗಿನ ಬಲೆಯ ರೂಪದಲ್ಲಿ, ಕಾರ್ಪೆಟ್ಟಿನ ಕೆಳಗಿನ ದೂಳಿನ ರೂಪದಲ್ಲಿ, ಮಕ್ಕಳ ರೂಮಿನಲ್ಲಿ ಅಡಗಿಸಿಟ್ಟ ಚಾಕ್ಲೆಟ್ಸ್ ಬಿಂಗೋ ರ‍್ಯಾಪರ್‌ಗಳ ರೂಪದಲ್ಲಿ ಈ ಕಸದಯ್ಯ ಟಂಗ್ ಎಂದು ಪ್ರತ್ಯಕ್ಷನಾಗಿ, ಕೈಗೆ ಹಿಡಿಸೂಡಿಯನ್ನು ಹಿಡಿಸಿಯೇ ಬಿಡುತ್ತಾನೆ. ನೀನಾರಿಗಾದೆ ಎಲೆ ನಾರಿಯೇ ಪರಪರ ಪೊರಕೆ ನಾನು, ಹಿಡಿ ಹಿಡಿ ಹಿಡುಗ್ಲು ನಾನು, ಬರಬರ ಬರ್ಲು ನಾನು, ಕಸಕಸ ಕಸಬರಿಗೆ ನಾನು... ಎಂದು ಕೆಲವೊಮ್ಮೆ ಕನಸಿನಲ್ಲಿ ಬಂದು ನನ್ನನ್ನು ಮೂದಲಿಸುವವರೆಗೂ ಇವು ಬೆಳೆದುಬಿಟ್ಟಿವೆ. ಆಗೆಲ್ಲ ನನ್ನ ಅಸ್ತಿತ್ವದ ಬಗ್ಗೆ ನನಗೇ ಚಿಂತೆ ಹುಟ್ಟಿಕೊಳ್ಳುತ್ತದೆ. ಈ ಮನಃಕಸಗಳನ್ನೋ ಕಷಾಯಗಳನ್ನೋ ಗುಡಿಸಿ ನಿರ್ಮಲವಾಗಿಸುವ ಕಸಬರಿಗೆಯೊಂದು ಇದ್ದಿದ್ದರೆ... ಅನಿಸುತ್ತದೆ. ಮನದ ಬೇಸರಿಕೆಗಳನ್ನು ಗುಡಿಸಿ ಬಿಸಾಡುವ ಕಸಬರಿಗೆ ಡಾಟ್ ಕಾಂ ಅನ್ನುವ ಆ್ಯಪ್‌ವೊಂದನ್ನು ನಾನೇ ಪ್ರಾರಂಭಿಸಿದರೆ ಹೇಗೆ ಎನ್ನುವ ಆಲೋಚನೆಯೂ ಹುಟ್ಟುತ್ತದೆ. ಮನುಷ್ಯರು ಮಿತಿಮೀರಿ ಕುಡಿದು ಡಿಂಗಾಗುವಂತೆ, ಗುಡ್